O.S. ನಂಬರಃ 35/2019
ಡಿ. ಡಬ್ಲ್ಯೂಃ 1

ದಿಃ 15-12-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ರವರಿಂದಃ

ನಾನು ಹತ್ತನೇ ತರಗತಿಯವರೆಗೆ ಕಲಿತಿರುತ್ತೇನೆ. ನಮ್ಮ ವಾಸ್ತವ್ಯದ ಮನೆಯು ಸರ್ವೆ ನಂ.34 ಬ/2 ರಲ್ಲಿ ಇರುತ್ತದೆ. 1976 ರಲ್ಲಿ ನನ್ನ ತಂದೆಯವರು ಸದರಿ ಜಮೀನನ್ನು ಖರೀದಿ ಮಾಡಿದರು. ಆಗ ನಾನು ಹುಟ್ಟಿರಲಿಲ್ಲ. ನಾನು ಖರೀದಿ ದಸ್ತಾವೇಜನ್ನು ನೋಡಿರುತ್ತೇನೆ. ಅದು ನನ್ನ ಹತ್ತಿರ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆಯ ಹೆಸರು ರಾಮಕೃಷ್ಣ ವೆಂಕಟೇಶ ಬಾಳಗಿ. ಅವರು ವಿಷ್ಣು ವೈಕುಂಟ ಪ್ರಭು ಇವರಿಂದ ಖರೀದಿ ಮಾಡಿರುತ್ತಾರೆ. ವಿಷ್ಣು ವೈಕುಂಟ ಪ್ರಭು ಇವರು ಸದರಿ ಜಮೀನು ಮತ್ತು ಮನೆಯನ್ನು ಮಾಧವ ಕೃಷ್ಣ ಶೆಟ್ಟಿ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯರದು 3 ಗುಂಟೆ ಜಮೀನು ಮತ್ತು ವಾಸ್ತವ್ಯದ ಮನೆ ಇರುತ್ತದೆ ಎಂದರೆ ಸರಿ. ವಿಷ್ಣು ವೈಕುಂಟ ಪ್ರಭು ಇವರ ಸಹೋದರಿ ರುಕ್ಮಿಣಿಯಾಗಿದ್ದಳು ಎಂದರೆ ಸರಿ. ರುಕ್ಮಿಣಿಯವರು ದತ್ತಾತ್ರೇಯ ಶಾನಬಾಗ ಇವರ ತಾಯಿಯಾಗಿದ್ದರು ಎಂದರೆ ಸರಿ. ರುಕ್ಮಿಣಿ ಇವರ ಪೂರ್ಣ ಹೆಸರು ರುಕ್ಮಿಣಿ ವಿಶ್ವನಾಥ ಶಾನಬಾಗ ಎಂದರೆ ಸರಿ. ನಮ್ಮ ತಂದೆಯವರು ಖರೀದಿ

ಮಾಡಿದ ಜಾಗ ವಿಷ್ಣು ವೈಕುಂಟ ಪ್ರಭು ಇವರದ್ದು ಆಗಿತ್ತು ಎಂದರೆ ಸರಿ. ಖರೀದಿ ಮಾಡುವ ಪೂರ್ವದಲ್ಲಿ 8 ಗುಂಟೆ ನಾಲ್ಕು ಮುಕ್ಕಾಲು ಜಾಗ ಈ ಮೊದಲು ಒಂದೇ ಮಾಲೀಕರಿಗೆ ಅಂದರೆ ಮಾಧವ ಕೃಷ್ಣ ಶೆಟ್ಟಿಗೆ ಸೇರಿದ್ದಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ಜಮೀನನ್ನು ವಿಷ್ಣು ವೈಕುಂಟ ಪ್ರಭು ಇವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಾಧವ ಕೃಷ್ಣ ಶೆಟ್ಟಿ ಇವರ ಕಾಲದಲ್ಲಿ 8 ಗುಂಟೆ 4 ಮುಕ್ಕಾಲು ಕ್ಷೇತ್ರದ ಜಮೀನಿನಲ್ಲಿ ಒಂದು ಬಾವಿ ಇತ್ತು ಎಂದರೆ ಇರಬಹುದು. ಸದರಿ ಬಾವಿ ಈಗಲೂ ಸಹ ಅದೇ ಜಾಗದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದು ಕುಸಿದು ಹೋಗಿದ್ದು, ನಮ್ಮ ತಂದೆಯವರು 1984 ರಲ್ಲಿ ಹೊಸ ಬಾವಿಯನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

2. 1984 ನೇ ಸಾಲಿನಲ್ಲಿ 5-6 ವರ್ಷದವನಾಗಿದ್ದೆ. ನೀವೇನಾದರೂ ಬಾವಿ ಕುಸಿದಿದ್ದನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಚಿಕ್ಕವನಿದ್ದೆ, ಆ ಕಡೆ ಹೋಗಿದ್ದೇ ಇರುವುದಿಲ್ಲ ಎಂದು ನುಡಿಯುತ್ತಾರೆ. 1984 ರ ಪೂರ್ವದಲ್ಲಿ ಇದ್ದ ಬಾವಿ ತೋರಿಸಲು ಏನಾದರೂ ದಾಖಲೆ ಇರುತ್ತದೆಯಾ ಎಂದರೆ ಸಾಕ್ಷಿಯು ನಕಾಶೆ ಇರುತ್ತದೆ ಎಂದು ನುಡಿಯುತ್ತಾರೆ. 1984 ರ ಪೂರ್ವದಲ್ಲಿದ್ದ ಬಾವಿಯ ಕುಸಿದಿಸಿದ್ದರ ಬಗ್ಗೆ ಏನಾದರೂ ಕಾಗದ ಪತ್ರಗಳು ಇರುತ್ತವೆಯಾ ಎಂದರೆ ಸಾಕ್ಷಿಯು ನನ್ನ ತಂದೆಯವರು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 1984 ರಲ್ಲಿ ನಮ್ಮ ತಂದೆಯವರು ಕಟ್ಟಿಸಿದ ಬಾವಿಯನ್ನು ತೋರಿಸಲು ಖರ್ಚು ಮಾಡಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

ಸದರಿ ಕ್ಷೇತ್ರದಲ್ಲಿ ತಕರಾರಿ ಬಾವಿಯನ್ನು ಬಿಟ್ಟು ಬೇರೆ ಬಾವಿ ಇತ್ತು ಎಂದು ತೋರಿಸಲು ಏನಾದರೂ ಕಾಗದ ಪತ್ರಗಳು ಇರುತ್ತವೆಯಾ ಎಂದರೆ ಸಾಕ್ಷಿಯು ನಕಾಶೆ ಬಿಟ್ಟು ಯಾವುದೂ ಇರುವುದಿಲ್ಲ ಎಂದು ನುಡಿಯುತ್ತಾರೆ. ವಿಷ್ಣು ವೈಕುಂಟ ಪ್ರಭು ಮತ್ತು ಅವರ ಸಹೋದರಿ ಎಲ್ಲಿ ವಾಸ್ತವ್ಯ ಇದ್ದರು ಎಂದರೆ ಸಾಕ್ಷಿಯ ವಿಷ್ಣು ವೈಕುಂಟ ಪ್ರಭು ಇವರು ಬೇರೆ ಎಲ್ಲೊ ಕಡೆ ವಾಸ ಮಾಡಿಕೊಂಡು ಇದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ಖರೀದಿ ಮಾಡಿದ ಸಮಯದಲ್ಲಿ ಮನೆ ಸಹಿತ ಖರೀದಿ ಮಾಡಿರುತ್ತಾರೆ. ನಮ ತಂದೆಯವರು ಖರೀದಿ ಮಾಡುವ ಪೂರ್ವದಲ್ಲಿ ಆ ಮನೆಯಲ್ಲಿ ಯಾರು ವಾಸ್ತವ್ಯ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಅಲ್ಲಿ ವಸ್ತವ್ಯ ಮಾಡುತ್ತಿದ್ದ ಜನರು ಯಾವ ಬಾವಿಯ ನೀರನ್ನು ಉಪಯೋಗಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ವಿಷ್ಣು ವೈಕುಂಟ ಪ್ರಭು ಮತ್ತು ಅವರ ಸಹೋದರಿ ರುಕ್ಮಿಣಿ ಇವರು ಈಗ ನಾವು ವಾಸ್ತವ್ಯ ಮಾಡುತ್ತಿದ್ದ ಮನೆಯಲ್ಲಿಯೇ ವಾಸಿಸುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

3. ವಿಷ್ಣು ವೈಕುಂಟ ಪ್ರಭು ಇವರು ಉಳಿದ 3 ಗುಂಟೆ ಜಾಗವನ್ನು ಅವರ ಸಹೋದರಿ ರುಕ್ಮಿಣಿ ಇವರಿಗೆ ವಾಂಟಣಿ ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕಾಗದ ಪತ್ರಗಳ ಮುಖಾಂತರ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ರುಕ್ಮಿಣಿ ವಿಶ್ವನಾಥ ಶಾನಬಾಗ ರವರಿಗೆ 3 ಗುಂಟೆ ಜಾಗವನ್ನು ವಾಂಟಣಿ ಮಾಡಿಕೊಡುವ ಜೊತೆಗೆ ತಕರಾರಿ ಬಾವಿಯ ನೀರನ್ನು ಉಪಯೋಗಿಸುವ ಹಕ್ಕನ್ನೂ ಸಹ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು

ವಾಂಟಣಿಯಲ್ಲಿ ಅದರ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ. ಅದು ನಮ್ಮ ಸ್ವಂತ ಬಾವಿಯಾಗಿದ್ದು, ನನ್ನ ವಕೀಲರಿಗೆ ಕಾಗದ ಪತ್ರವನ್ನು ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ವಿಷ್ಣು ವೈಕುಂಟ ಪ್ರಭು ಇವರು ಜೀವಂತ ಇರಬೇಕಾದರೆ ರುಕ್ಮಿಣಿ ಇವರು ಬಾವಿಯ ನೀರನ್ನು ಉಪಯೋಗ ಮಾಡಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಈಗ ಇರುವ ಬಾವಿಯ ನಮ್ಮ ಸ್ವಂತ ಬಾವಿಯಾಗಿದ್ದು, ಅದರಿಂದ ನೀರನ್ನು ತೆಗೆದುಕೊಳ್ಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಸ್ತಾವೇಜನ್ನು ಬರೆದುಕೊಡುವ ಸಂದರ್ಭದಲ್ಲಿ ತಕರಾರಿ ಬಾವಿಯಿಂದ ರುಕ್ಮಿಣಿ ಮತ್ತು ಅವರ ಮನೆಯವರಿಗೆ ನೀರನ್ನು ತೆಗೆದುಕೊಳ್ಳುವ ಹಕ್ಕು ಉಲ್ಲೇಖ ಮಾಡಿದ್ದರೆ ಸದರಿ ಹಕ್ಕನ್ನು ಅಲ್ಲಗಳೆಯುತ್ತೀರಾ ಎಂದರೆ ಸಾಕ್ಷಿಯು ಅದು ಸ್ಪಷ್ಟವಾಗಿದ್ದರೆ ನಾನು ತೊಂದರೆ ಕೊಡುವುದಿಲ್ಲ ಎಂದು ನುಡಿಯುತ್ತಾರೆ. ಇದರ ಬಗ್ಗೆ ನಮ್ಮ ತಂದೆಯವರು ಖರೀದಿ ಮಾಡಿದ ದಸ್ತಾವೇಜಿನಲ್ಲಿ ನಮೂದು ಇದ್ದರೂ ಸಹ ಉದ್ದೇಶ ಪೂರಕವಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.